ಇದರ ಬೆಗ್ಗೆ ಮೂರು ತಿಂಗಳಿನಲ್ಲಿ ವರದಿಯನ್ನು ಕೊಟ್ಟ ನಂತರ ಈ ಬಗ್ಗೆ ಸರ್ಕಾರ ಏನು ಮಾನದಂಡವನ್ನು ಫಿಕ್ಸ್ ಮಾಡಬಹುದೆಂಬ ಬಗ್ಗೆ ಮುಂದಿನ ಮೂರು ತಿಂಗಳಲ್ಲಿ ಸರ್ಕಾರ ವರದಿಯನ್ನು ತರಿಸಿ, ಈ ಬಗ್ಗೆ ಖಂಡಿತವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಯು.ಟಿ.ಖಾದರ್ :– ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಸೋಮೇಶ್ವರ ಗ್ರಾಮದಲ್ಲಿ ಕೂಡ ಗ್ರಾಮ ಪಂಚಾಯಿತ್‌ನ ಚುನಾವಣೆಯಾಗಿ ಒಂದು ವರ್ಷವಾಯಿತು. ಪಟ್ಟಣ ಪಂಚಾಯತ್ ಇದ್ದರೆ ಅದು ಪಟ್ಟಣ ಪಂಚಾಯತ್ ಆಗುತ್ತದೆ. ಆದರೆ ಇಲ್ಲಿ ಈಗ ಗ್ರಾಮ ಪಂಚಾಯತ್ ಇಲ್ಲ, ಪಟ್ಟಣ ಪಂಚಾಯತ್ ಇಲ್ಲ. ಇಲ್ಲಿ ಅಭಿವೃದ್ಧಿ ಕುಂಠಿತವಾಗಿರುವ ಕಾರಣ ಅಲ್ಲಿಗೆ ಮುಲಭೂತ ಸೌಕರ್ಯ ಕೊಡುವಂಥಾದ್ದು ಆಗಬೇಕು. ಈ ಸೋಮೇಶ್ವರ ಗ್ರಾಮ ಪಂಚಾಯತ್ ಬಗ್ಗೆ ಮಾನ್ಯ ಸಚಿವರು ಕಾಳಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೋಳಿ :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಹೇಳಿದಹಾಗೆ ಪೌರಾಡಳಿತ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆಮಾಡಿ, ಅದರ ವರದಿಯನ್ನು ತರಿಸುತ್ತೇವೆ. ಆಗ ನಿಮ್ಮ ಗ್ರಾಮದ ಬಗ್ಗೆಯೂ ಪರಿಶೀಲನೆ ಮಾಡುವುದಕ್ಕೆ ಹೇಳುತ್ತೇನೆ. ಅದೆಲ್ಲಾ ಬಂದನಂತರ ಸರ್ಕಾರ ಈ ಬಗ್ಗೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತದೆಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದಲ್ಲಿರುವ ಪುರಸಭೆಗಳಿಗೆ ಮಂಜೂರಾಗಿರುವ ಅನುದಾನದ ಬಗ್ಗೆ.

.ಕರ್ನಾಟಕ ವಿಧಾನ ಸಭೆ

18(257) ಶ್ರೀ ಬಚ್ಚೇಗೌಡ ಕೆ.ಪಿ (ಚಿಕ್ಕಬಳ್ಳಾಪುರ)

ಶ್ರಿ ಬಾಲಚಂದ್ರ ಜಾರಕಿಹೊಳಿ(ಮಾನ್ಯ ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು)

ಅ) ರಾಜ್ಯದಲ್ಲಿರುವ ಪುರಸಭೆಗಳಿಗೆ ವಿವಿಧ ಇಲಾಖೆಗಳಿಂದ ವಿವಿಧ ಕಾಮಗಾರಿಗಳಿಗಾಗಿ 2008–09ರಲ್ಲಿ ಮಂಜೂರಾತಿ ನೀಡಿರುವ ಅನುದಾನವೆಷ್ಟು (ಇಲಾಖಾವಾರು ಮಾಹಿತಿ ನೀಡುವುದು)

ನಗರ ಸ್ಥಳೀಯ ಸಂಸ್ಥೆಗಳಿಗೆ 2008–09ನೇ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು 7 ಕಾಮಗಾರಿಗಳಿಗೆ ಈವರೆವಿಗೆ ಬಿಡುಗಡೆ ಆಗಿರುವ ಅನುದಾನದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

(ಕೋಟಿ ರೂಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	ನಿಗದಿಪಡಿಸಿರುವ ಅನುದಾನ	ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿರುವ ಅನುದಾನ
1	ಎಸ್ಎಫ್ಸಿ ಮುಕ್ತನಿಧಿ ಅನುದಾನ	1088.00	678.12
2	ಎಸ್ಎಫ್ಸಿ ವಿಶೇಷ ಅನುದಾನ	140.00	113.85
3	12ನೇ ಹಣಕಾಸು ಯೋಜನೆ ರಸ್ತೆ ಮತ್ತು ಸೇತುವೆ ನಿರ್ಮಾಣ	110.43	55.215
4	ಯುಐಡಿಎಸ್ಎಸ್ಎಂಟಿ	100.00	83.03
5	ಎಸ್ಜೆಎಸ್ಆರ್ವೈ	48.64	38.55
6	ಮಳೆನೀರು ಕೊಯ್ಲು ಕಾಮಗಾರಿ ಮತ್ತು ಮಾನವ ಮಲ ಹೊರುವ ಪದ್ಧತಿ ತೊಡೆದು ಹಾಕಲು ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡಲು	25.00	11.00

ಆ) ಅನುದಾನವನ್ನು ನೀಡುವಾಗ ತಾರತಮ್ಯವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣಗಳೇನು (ಪೂರ್ಣ ಮಾಹಿತಿ ನೀಡುವುದು)

ಇಲ್ಲ

ಉದ್ಭವಿಸುವುದಿಲ್ಲ.

ಇ) ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಆಡಳಿತ ಪಕ್ಷಕ್ಕೆ ಸೇರಿದ ಕ್ಷೇತ್ರಗಳಿಗೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿರುವುದು ನಿಜವೇ; ಹಾಗಿದ್ದಲ್ಲಿ ಪ್ರತಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು;

2008–09ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆವಾರು ಬಿಡುಗಡೆ ಮಾಡಲಾದ ವಿಶೇಷ ಅನುದಾನದ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಈ) ಉಪಚುನಾವಣೆ ನಂತರ ತುರುವೇಕೆರೆ, ಮಧುಗಿರಿ ಹಾಗೂ ಮದ್ದೂರು ಕ್ಷೇತ್ರಗಳಿಗೆ ನೀಡಿದ ಅನುದಾನವನ್ನು ಸರ್ಕಾರ ವಾಪಸ್ಸು ಪಡೆಯಲಾಗಿದೆಯೇ ಅಥವಾ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆಯೇ (ಮಾಹಿತಿ ನೀಡುವುದು)

ಇಲ್ಲ.

ಅನುಬಂಧ

2008–09ನೇ ಸಾಲಿನ ಎಸ್‌ಎಫ್‌ಸಿಯಡಿ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ/ಬಿಡುಗಡೆ ಮಾಡಲಾಗಿರುವ ವಿಶೇಷ ಅನುದಾನದ ವಿವರ

ರೂ ಲಕ್ಷಗಳಲ್ಲಿ)

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆ ಮಾಡಲಾದ ವಿಶೇಷ ಅನದಾನ	ಈವರೆಗೆ ಬಿಡುಗಡೆ ಮಾಡಿರುವ ಅನುದಾನ
1	2	3	4
	City Corporations		
1	Belgaum	225.00	225.00
2	Bellary	50.00	50.00
3	Davanagere	50.00	50.00
4	Gulbarga *	200.00	100.00
5	Hubli Dharwad	100.00	100.00
6	Mangalore	300.00	300.00
	Sub Total	**925.00**	**825.00**
	City Municipal Council		
7	Bagalkote	125.00	75.00
8	Basavanakalyan *	50.00	25.00
9	Bidar	300.00	300.00
10	Chamarajanagara *	50.00	25.00
11	Chickamagalur	50.00	25.00
12	Chitradurga	200.00	200.00
13	Dandeli	25.00	12.50
14	Doddaballapur	300.00	300.00
15	Gadag-betageri	325.00	325.00

16	Gangavathi *	125.00	125.00
17	Gokak *	100.00	50.00
18	Harihar	100.00	100.00
19	Haveri *	25.00	25.00
20	Ilkal	100.00	62.50
21	Jamakhandi	25.00	25.00
22	Karwar	200.00	200.00
23	Kolar	25.00	25.00
24	Kollegal	50.00	25.00
25	Koppal *	50.00	25.00
26	Madikeri	125.00	125.00
27	Rabkavi Banahatti	75.00	50.00
28	Raichur *	25.00	25.00
29	Ranebennur	125.00	125.00
30	Robertsonpet	100.00	100.00
31	Sagar	125.00	125.00
32	Shimoga	100.00	100.00
33	Sindanoor *	50.00	25.00
34	Sira *	50.00	25.00
35	Sirsi	50.00	25.00
36	Tiptur	125.00	125.00
37	Yadgiri *	50.00	25.00
	Sub Total	**3225.00**	**2825.00**
	Town Municipal Council		
38	Aland *	50.00	25.00
39	Anekal	75.00	50.00
40	Annigeri	50.00	37.50
41	Athani *	25.00	25.00
42	Badami *	200.00	200.00
43	Bagepalli *	50.00	25.00
44	Bankapura	30.00	15.00

45	Bannur	10.00	5.00
46	Bantwal	25.00	25.00
47	Basavana Bagewadi *	50.00	25.00
48	Bhalki *	25.00	25.00
49	Bhatkal *	50.00	25.00
50	Bydagi *	25.00	12.50
51	Challakere *	50.00	25.00
52	Chikkodi	200.00	100.00
53	Chittapur *	50.00	25.00
54	Devadurga *	352.00	325.00
55	Gajendragad	125.00	75.00
56	Gowribidanur *	75.00	50.00
57	Guledagudda	25.00	25.00
58	Gundlupete *	50.00	25.00
59	Hanagal	25.00	25.00
60	Harapanahalli	50.00	25.00
61	Hiriyur *	60.00	47.50
62	Hosadurga *	65.00	45.00
63	Humnabad *	50.00	25.00
64	Indi *	50.00	25.00
65	Kadur *	75.00	37.50
66	Kampli	25.00	25.00
67	Kanakapura *	300.00	300.00
68	K.R.Pet *	60.00	30.00
69	Kumta	25.00	25.00
70	Kundapur	100.00	100.00
71	Kunigal *	50.00	25.00
72	Kustagi *	75.00	37.00
73	Lakshmeshwara	50.00	50.00
74	Lingasugur *	50.00	25.00
75	Maddur	200.00	100.00
76	Madhugiri *	300.00	300.00

77	Magadi *	50.00	25.00
78	Mahalingapura	50.00	37.50
79	Malavalli *	25.00	25.00
80	Malur *	25.00	25.00
81	Manvi *	50.00	25.00
82	Mudalagi	200.00	200.00
83	Muddebihal *	50.00	25.00
84	Mudhol	75.00	37.50
85	Mundargi *	50.00	25.00
86	Naragunda	125.00	125.00
87	Navalagund *	35.00	35.00
88	Nelmangala	100.00	100.00
89	Pavagada *	25.00	25.00
90	Puttur	50.00	50.00
91	Ron *	25.00	12.50
92	Sandoor *	50.00	25.00
93	Sankeshwar	200.00	200.00
94	Saundatti *	30.00	15.00
95	Savanoor *	30.00	15.00
96	Sedam *	25.00	25.00
97	Shahapur *	50.00	25.00
98	Shiggon *	30.00	15.00
99	Shikaripura *	400.00	275.00
100	Shiragoppa *	50.00	37.50
101	Surapura *	50.00	25.00
102	Sindhagi *	50.00	25.00
103	Tarikere *	100.00	100.00
104	Terdal	75.00	50.00
	Sub Total	**5250.00**	**3997.50**
	Town Panchayath		
105	Afzalpura *	50.00	25.00
106	Ankola *	200.00	200.00

107	Aurad *	50.00	25.00
108	Bilagi *	100.00	100.00
109	Channagiri *	175.00	137.50
110	Chincholi *	75.00	37.50
111	Gubbi *	50.00	25.00
112	Gurumitkal	300.00	300.00
113	H.D.Kote *	50.00	25.00
114	Haliyal	10.00	5.00
115	Hirekerur *	50.00	25.00
116	Holalkere *	150.00	125.00
117	Honnali *	250.00	225.00
118	Hanur	25.00	25.00
119	Hosanagara	50.00	25.00
120	Hukkeri *	200.00	200.00
121	Hunagunda *	75.00	37.50
122	Jagalur *	300.00	300.00
123	Jewargi *	300.00	250.00
124	Kalaghatagi *	50.00	25.00
125	Khanapura	50.00	25.00
126	Konnur	50.00	25.00
127	Koppa	50.00	37.50
128	Koratagere *	50.00	25.00
129	Kottur	25.00	25.00
130	Kudalagi *	50.00	25.00
131	Kundagol *	25.00	
132	KushaLanagara	100.00	100.00
133	Molakalmuru *	50.00	25.00
134	Mudigere	25.00	25.00
135	Mundagod	45.00	22.50
136	Nagamangal *	50.00	25.00
137	Naragel	75.00	37.50
138	Narasimharajapura	50.00	37.50

139	Pandavapura *	25.00	12.50
140	Raibagh *	50.00	25.00
141	Sadalga	25.00	12.50
142	Shirahatti *	50.00	50.00
143	Shiralakoppa	200.00	150.00
144	Shringeri	150.00	137.50
145	Siddapura *	25.00	
146	Somvarpet	25.00	25.00
147	Soraba *	125.00	125.00
148	Sullia	25.00	25.00
149	T.Narsipura *	25.00	12.50
150	Tekkalakote	25.00	25.00
151	Thirthahalli	125.00	125.00
152	Turuvekere *	300.00	300.00
153	Virajpet	50.00	25.00
154	Yelburga *	100.00	100.00
155	Yellapura	20.00	10.00
	Sub Total	**4550.00**	**3712.50**
	Notified Area Committees		
156	Gokak Falls	50.00	25.00
	Sub Total	**50.00**	**25.00**
	Total	**14000.00**	**11385.00**

ಶ್ರೀ ಕೆ.ಪಿ.ಬಚ್ಚೇಗೌಡ :– ಮಾನ್ಯ ಉಪಾಧ್ಯಕ್ಷರೆ, ನಾನು ರಾಜ್ಯದಲ್ಲಿರುವಂಥ ಪುರಸಭೆಗಳಿಗೆ ವಿವಿಧ ಇಲಾಖೆಗಳಿಂದ ವಿವಿಧ ಕಾಮಗಾರಿಗಳಿಗೆ ಕೊಡುವ ಅನುದಾನದಲ್ಲಿ ತಾರತಮ್ಯವಾಗಿದೆಯೇ ಇದು ಸರ್ಕಾರ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದಂಥ ಆಡಳಿತ ಪಕ್ಷಕ್ಕೆ ಸೇರಿದ ಸದಸ್ಯರ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಿಲಾಗಿದೆಯೇ? ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಸ್ಥಳೀಯ ಸಂಸ್ಥೆವಾರು ಬಿಡುಗಡೆ ಮಾಡಲಾಗಿರುವ ವಿಶೇಷ ಅನುದಾನದ ವಿವರಗಳ ಅನುಬಂಧವನ್ನು ಉತ್ತರದೊಂದಿಗೆ ಲಗತ್ತಿಸಿದ್ದಾರೆ. ಅದರಲ್ಲಿ

ನಾನು ಗಮನಿಸಿದ ಅಂಶಗಳೆಂದರೆ, ದೊಡ್ಡಬಳ್ಳಾಪುರಕ್ಕೆ 300 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ, ಈ 300 ಲಕ್ಷ ರೂ.ಗಳು ಬಿಡುಗಡೆಯಾಗಿದೆ. ಅದೇ ರೀತಿಯಾಗಿ ಮದ್ದೂರಿಗೆ 200 ಲಕ್ಷ ರೂ.ಗಳನ್ನು ಕೊಟ್ಟು ಕೇವಲ 100 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ತುರುವೇಕೆರೆಗೆ 300 ಲಕ್ಷ ರೂ.ಗಳನ್ನು ಕೊಟ್ಟು 300 ಲಕ್ಷ ರೂ.ಗಳು ಬಿಡುಗಡೆಯಾಗಿದೆ. ಮಧುಗಿರಿಗೆ 300 ಲಕ್ಷ ರೂ.ಗಳನ್ನು ಕೊಟ್ಟು 300 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ. ಯಾರು ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಂಥ ಸದಸ್ಯರುಗಳಿದ್ದರು, ಆ ಕ್ಷೇತ್ರಗಳಿಗೆ ಹಣ ಬಿಡುಗಡೆಯಲ್ಲಿ ತಾರತಮ್ಯವನ್ನು ಮಾಡಿ, ಹೆಚ್ಚಿನ ಹಣವನ್ನು ಪುರಸಭೆಗಳಿಗೆ ಬಿಡುಗಡೆ ಮಾಡಿದ್ದಾರೆ. ಡಾ: ನಂಜುಂಡಪ್ಪ ವರದಿಯಲ್ಲಿ ಅತೀ ಹಿಂದುಳಿದ ತಾಲ್ಲೂಕುಗಳೆಂದು ಘೋಷಣೆ ಮಾಡಿರುವಂಥ ತಾಲ್ಲೂಕುಗಳ ಬಗ್ಗೆ ಉದಾಹರಣೆಗೆ ಹೇಳುವುದಾದರೆ ಬಾಗೇಪಲ್ಲಿಗೆ ಕೇವಲ 50 ಲಕ್ಷ ರೂ.ಗಳನ್ನು ಕೊಟ್ಟು ಬರೀ 25 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಗೌರಿಬಿದನೂರು ಸಹ ಹಿಂದುಳಿದ ತಾಲ್ಲೂಕಾಗಿದ್ದು ಇದಕ್ಕೂ 75 ಲಕ್ಷ ರೂ.ಗಳನ್ನು ಕೊಟ್ಟು 50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಚಾಮರಾಜನಗರ ಸಿಟಿ ಮುನಿಸಿಪಲ್ ಕಾರ್ಪೋರೇಷನ್‌ಗೆ 50 ಲಕ್ಷ ರೂ.ಗಳನ್ನು ಕೊಟ್ಟು ಕೇವಲ 25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ನನ್ನ ಕ್ಷೇತ್ರವಾದ ಚಿಕ್ಕಬಳ್ಳಾಪುರಕ್ಕೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ನಾನು ಏನಾದರೂ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರೆ ನನ್ನ ಕ್ಷೇತ್ರಕ್ಕೂ ಹಣವನ್ನು ಬಿಡುಗಡೆ ಮಾಡುತ್ತಾರಾ? ಆ ರೀತಿ ಏನಾದರೂ ನನ್ನ ಕ್ಷೇತ್ರ ಅಭಿವೃದ್ಧಿಯಾಗುತ್ತದೆಯೇ?

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರವಾದ ಶ್ರೀರಂಗಪಟ್ಟಣವೂ ಸಹ ಅತೀ ಹಿಂದುಳಿದಿದೆ. ಇದಕ್ಕೂ ಸಹ ಹಣವನ್ನು ಬಿಡುಗಡೆ ಮಾಡಿಲ್ಲ.

ಶ್ರೀ ಕೆ.ಪಿ.ಬಚ್ಚೇಗೌಡ :– ನನ್ನ ಕ್ಷೇತ್ರಕ್ಕೆ ಈ ತಾರತಮ್ಯ ಏಕೆ ಎನ್ನುವ ವಿಷಯವನ್ನು ಮಾನ್ಯ ಸಚಿವರು ಹೇಳಬೇಕು. ಡಾ: ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಅನುದಾನವನ್ನು ಕೊಟ್ಟಿಲ್ಲ. ನಮ್ಮ ಪಕ್ಕದ ಕ್ಷೇತ್ರವಾದ ದೊಡ್ಡಬಳ್ಳಾಪುರಕ್ಕೆ 300 ಲಕ್ಷ ರೂ.ಗಳನ್ನು ಕೊಟ್ಟಾಗ, ಅದರ ಪಕ್ಕದಲ್ಲಿರುವ ನಮ್ಮ ಕ್ಷೇತ್ರವಾದ ಚಿಕ್ಕಬಳ್ಳಾಪುರಕ್ಕೆ 3 ಲಕ್ಷ ರೂ.ಗಳನ್ನು ಕೊಟ್ಟಲ್ಲ. ಇದು ನನ್ನ ಕ್ಷೇತ್ರಕ್ಕೆ ಮಾತ್ರ ಸಂಬಂಧಪಟ್ಟಹಾಗೆ ಅಲ್ಲ, ಇಡೀ ರಾಜ್ಯದಲ್ಲಿ ಈ ತಾರತಮ್ಯವಾಗಿದೆ. ಈ ಅನುಬಂಧವನ್ನು ನೋಡಿದರೆ ಗೊತ್ತಾಗುತ್ತದೆ. ಈ ತಾರತಮ್ಯ ಏಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅನುದಾನವನ್ನು ನೀಡುವಾಗ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಸರ್ಕಾರದಿಂದ ಉತ್ತರ ಉದ್ಭವಿಸುವುದಿಲ್ಲವೆಂದು ಕೊಟ್ಟಿದ್ದಾರೆ. ನೀವೇ ಪ್ರಾಮಾಣಿಕವಾಗಿ ನಿಮ್ಮ ಆತ್ಮವನ್ನು ಮುಟ್ಟಿ ಹೇಳಿ, ಇದರಲ್ಲಿ ತಾರತಮ್ಯವಾಗಿಲ್ಲವೇ? ನಮ್ಮ ಕ್ಷೇತ್ರವೂ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದ್ದು, ನಮಗೆ ಏನು ಕೊಟ್ಟಿದ್ದೀರಾ? ಇದರಲ್ಲಿ ಒಂದು ರೂಪಾಯಿಯನ್ನು ಆದರೂ ಕೊಟ್ಟಿದ್ದೀರಾ? ಇಲ್ಲಿ ಯಾರು ಬಿ.ಜೆ.ಪಿ.ಯ ಶಾಸಕರು ಇದ್ದಾರೆ. ಅವರಿಗೆ ಮಾತ್ರ ಅನುದಾನವನ್ನು ಕೊಡುವಂಥ ಕೆಲಸ ನಡೆದಿದೆ. ಅದನ್ನು ಬಿಟ್ಟು ಬೇರೆ ಯಾರಿಗಾದರೂ ನೀವು ಅನುದಾನವನ್ನು ಕೊಟ್ಟಿದ್ದೀರಾ?

ಶ್ರೀ ಬಾಲಚಂದ್ರ ಜಾರಕಿಹೊಳಿ :– ಮಾನ್ಯ ಬಾಲಕೃಷ್ಣರವರೆ, ನನಗೆ ಉತ್ತರವನ್ನು ಹೇಳುವುದಕ್ಕೆ ಬಿಡಿ, ನಾನು ಉತ್ತರ ಹೇಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಇಲ್ಲಿ ಡಾ:ನಂಜುಂಡಪ್ಪ ವರದಿಯೂ ಇಲ್ಲ, ಇಲ್ಲಿ ಯಾವುದೂ ಇಲ್ಲ, ಹಿಂದುಳಿದ ತಾಲ್ಲೂಕು ಇಲ್ಲ. ಈಗ ಮಾನ್ಯ ಬಚ್ಚೇಗೌಡರು ನಾವು ರಾಜೀನಾಮೆಯನ್ನು ಕೊಟ್ಟರೆ ಅನುದಾನವನ್ನು ಕೊಡುತ್ತೀರಾ? ಎಂದು ಕೇಳುತ್ತಿದ್ದಾರೆ. ಅದನ್ನಾದರೂ ಹೇಳಿ, ನೀವು ರಾಜೀನಾಮೆಯನ್ನು ಕೊಡಿ, ಅನುದಾನವನ್ನು ಕೊಡುತ್ತೇವೆಂದು ಹೇಳಿ.

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಮಾನ್ಯ ಉಪಾಧ್ಯಕ್ಷರೆ, ಶ್ರೀರಂಗಪಟ್ಟಣ ಹಿಂದುಳಿದ ತಾಲ್ಲೂಕಿನಲ್ಲಿದೆ. ಶ್ರೀರಂಗಪಟ್ಟಣ ಪುರಸಭೆ ಒಂದನ್ನು ಬಿಟ್ಟು ಮಂಡ್ಯ ಜಿಲ್ಲೆಯಲ್ಲಿ ಎಲ್ಲರಿಗೂ ಹಣವನ್ನು ಬಿಡುಗಡೆ ಮಾಡಿದ್ದಾರೆ. ಈತಾರತಮ್ಯ ನೀತಿ ಏಕೆಂಬುದು ಗೊತ್ತಾಗುತ್ತಿಲ್ಲ.

ಶ್ರೀ ಹೆಚ್,ಸಿ.ಬಾಲಕೃಷ್ಣ :– ಈ ಹಣವನ್ನು ಮಂತ್ರಿಗಳು ಬಿಡುಗಡೆ ಮಾಡಿರುವಂಥಾದ್ದೊ ಅಥವಾ ಮಾನ್ಯ ಮುಖ್ಯಮಂತ್ರಿಯವರು ಬಿಡುಗಡೆ ಮಾಡಿರುವಂಥಾದ್ದೋ ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಯವರು ಹೇಳಬೇಕು. ಇದನ್ನು ಬಿಡುಗಡೆ ಮಾಡುವಂಥಾದ್ದು ನಿಮ್ಮ ಗಮನಕ್ಕೆ ಏನಾದರೂ ಬಂದಿದೆಯೋ? ನಿಮ್ಮ ಗಮನಕ್ಕೆ ಬರದೇ ಈ ಹಣವನ್ನು ಮಾನ್ಯ ಮುಖ್ಯಮಂತ್ರಿಯವರೆ ಬಿಡುಗಡೆ ಮಾಡಿದ್ದಾರೆಯೇ? ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಿಂದ ಹನ ಬಿಡುಗಡೆಯಾಗಿದೆಯೇ ಎಂಬುದನ್ನು ಕೇಳಿ.

ಶ್ರೀ ಬಾಲಚಂದ್ರ ಜಾರಕಿಹೊಳಿ :– ಮಾನ್ಯ ಉಪಾಧ್ಯಕ್ಷರೆ, ಶಾಸಕರಾದ ಮಾನ್ಯ ಬಚ್ಚೇಗೌಡರು ಎಸ್ಎಫ್ಸಿ ಗ್ರಾಂಟ್ನಲ್ಲಿ ಅನುದಾನ ಸರಿಯಾಗಿ ಬಿಡುಗಡೆ ಮಾಡಿಲ್ಲ. ತಾರತಮ್ಯ ಮಾಡಿದ್ದರೆಂದು ಹೇಳಿದ್ದಾರೆ. ನಾವು ಇದರಲ್ಲಿ ತಾರತಮ್ಯ

ಮಾಡಿಲ್ಲ, ಡಾ:ನಂಜುಂಡಪ್ಪ ವರದಿಯ ವ್ಯಾಪ್ತಿಯಲ್ಲಿ ಬರುವಂಥ 86 ತಾಲ್ಲೂಕುಗಳಿಗೆ ಈ ದುಡ್ಡನ್ನು ಬಿಡುಗಡೆ ಮಾಡಿದ್ದೇವೆ. ಡಾ:ನಂಜುಂಡಪ್ಪ ವರದಿಯ ಪ್ರಕಾರ ಬಿಡುಗಡೆ ಮಾಡಿಲ್ಲ. ಅದರೂ 86 ತಾಲ್ಲೂಕುಗಳನ್ನು include ಮಾಡಿ, ಇದನ್ನು ನಾವು modification ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಅವು ಮಧುಗಿರಿ ಇರಬಹುದು, ತುರುವೇಕೆರೆ, ಮದ್ದೂರು ಇರಬಹುದು. ನಾವು ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ, ಕೆಲಸವೂ ಪ್ರಾರಂಭವಾಗಿದೆ. ತಾವು ದುಡ್ಡನ್ನು ಕೊಟ್ಟಿಲ್ಲವೆಂದು ಹೇಳಿದ್ದೀರಿ, ಇದರಲ್ಲಿ ನಾವು ತಾರತಮ್ಯ ಮಾಡಿಲ್ಲ, ಯಾರಿಗೂ ಕಡಿಮೆ ಕೊಟ್ಟಿಲ್ಲ. ಕಳೆದ ಬಾರಿ ಇದಕ್ಕಿಂತಲೂ ಜಾಸ್ತಿ ಹಣ ಕೆಲವೊಂದು ಕ್ಷೇತ್ರಗಳಿಗೆ ಬಂದಿದೆ, ಈ ಸಲ ಕಡಿಮೆ ಹಣ ಬಂದಿದೆ. ಅಂಥ ಪ್ರಕರಣಗಳು ಏನೇ ಇದ್ದರೂ ಈ ಸಾರಿ ಬಜೆಟ್‌ನಲ್ಲಿ ಸಾಕಷ್ಟು ಹಣ ಈ ಇಲಾಖೆಗೆ ಬಂದಿದೆ. ಇದನ್ನು ಸರಿಮಾಡಬಹುದು, ನಿಮ್ಮಲ್ಲಿ ಕೆಲಸಕ್ಕೆ ಅವಶ್ಯಕತೆ ಇದ್ದರೆ ಖಂಡಿತ ಹಣವನ್ನು ಬಿಡುಗಡೆ ಮಾಡಿ ಅದನ್ನು ಸರಿಪಡಿಸುತ್ತೇವೆ. ಈಗ ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ 2006–07ರಲ್ಲಿ 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆಗ 89 ಪೌರ ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದರು. 2007–08ರಲ್ಲಿ 145 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ 210 ಪೌರಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದರು. 2008–09ನೇ ಸಾಲಿನಲ್ಲಿ ಎಸ್‌ಎಫ್‌ಸಿ ಗ್ರಾಂಟ್ 140 ಕೋಟಿ ರೂಪಾಯಿಗಳನ್ನು 156 ಪೌರ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ್ದೇವೆ. ನಾವು ಇದರಲ್ಲಿ ತಾರತಮ್ಯ ಮಾಡಿಲ್ಲ. ಆ ರೀತಿ ತಮಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದರೆ ಮುಂದಿನ ಬಜೆಟ್‌ನಲ್ಲಿ ಎಲ್ಲಾ ಸಂಸ್ಥೆಗಳಿಗೂ ಒಂದೇ ರೀತಿಯಲ್ಲಿ ಅದು ನಗರ ಸಭೆ ಇರಬಹುದು, ಪುರಸಭೆ, ಪಟ್ಟಣ ಪಂಚಾಯತ್‌ಗೆ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಘೋಷಣೆ ಮಾಡಿದ್ದಾರೆ. ಅದನ್ನು ಮುಂದಿನ ದಿವಸಗಳಲ್ಲಿ ಸರಿಪಡಿಸುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಪಿ.ಬಚ್ಚೇಗೌಡ :–ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಹಿಂದುಳಿದ ಬಾಗೇಪಲ್ಲಿ ತಾಲ್ಲೂಕಿಗೆ ಕೇವಲ 50 ಲಕ್ಷ ರೂ.ಗಳನ್ನು ಮಂಜೂರು ಮಾಡಿದರೆ, ದೊಡ್ಡಬಳ್ಳಾಪುರ ಡಾ:ನಂಜುಂಡಪ್ಪನವರ ವರದಿಯಲ್ಲಿ ಇಲ್ಲ. ಅಂಥ ತಾಲ್ಲೂಕಿಗೆ 300 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಡಾ:ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ಪ್ರದೇಶವೆಂದು ಗುರುತಿಸಲಾದ ಚಾಮರಾಜನಗರಕ್ಕೆ ಕೇವಲ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವಂಥಾದ್ದನ್ನು ನೋಡಿದರೆ ಮೇಲ್ನೋಟಕ್ಕೆ ತಾರತಮ್ಯವಾಗಿರುವಂಥಾದ್ದು ಗೊತ್ತಾಗುತ್ತದೆ. ಅದೇ ಚಿಕ್ಕಬಳ್ಳಾಪುರದಲ್ಲಿ ಒಂದು ರೂಪಾಯಿ ಕೂಡ ಅನುದಾನ ಬಿಡುಗಡೆಯಾಗಿಲ್ಲ. ಅದುದರಿಂದ ಇದನ್ನು ಸರಿಪಡಿಸಿ ಮುಂದಿನ ಸಾಲಿನಲ್ಲಿ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ :–ಮಾನ್ಯ ಉಪಾಧ್ಯಕ್ಷರೆ, ಚಿಕ್ಕಾಬಳ್ಳಾಪುರ ಕ್ಷೇತ್ರ ನಗರಸಭೆ ವ್ಯಾಪ್ತಿಗೆ ಬರುವುದರಿಂದ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಘೋಷಣೆ ಮಾಡಿದ ಹಾಗೆ 15 ಕೋಟಿ ರೂಪಾಯಿಗಳ ಅನುದಾನ ಬರುತ್ತದೆ. ಸಾಕಷ್ಟು ಹಣ ಬಂದಾಗ ತಾವು ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಆ ದುಡ್ಡನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಿ. ನಿಮಗೆ ಒಂದು ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಅಷ್ಟು ಹಣ ನಿಮಗೆ ಬರುತ್ತದೆ. ಡಾ:ನಂಜುಂಡಪ್ಪ ವರದಿಯಲ್ಲಿ ಕೆಲವೊಂದಕ್ಕೆ ಕಡಿಮೆ ಹಣ ಬಂದಿರಬಹುದು, ಕೆಲವೊಂದಕ್ಕೆ ಹೆಚ್ಚು ಕೊಟ್ಟಿರುವಂಥಾದ್ದು ಆಗಿದೆ. ಮುಂದಿನ ದಿವಸಗಳಲ್ಲಿ ನಿಮಗೆ ಬರುವ 15 ಕೋಟಿ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಿಯೆಂದು ವಿನಂತಿ ಮಾಡುತ್ತೇನೆ.

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ :– ಮಾನ್ಯ ಉಪಾಧ್ಯಕ್ಷರೆ, ಶ್ರೀರಂಗಪಟ್ಟಣ ಪುರಸಭೆಗೆ ಈ ಸಲವಾದರೂ.. .. ..

ಉಪಾಧ್ಯಕ್ಷರು :– ತಾವು ಹೇಳಿದ್ದೀರಲ್ಲಾ.. ..

ಶ್ರೀ ಬಾಲಚಂದ್ರ ಜಾರಕಿಹೊಳಿ:– ತಮಗೆ ಏನೂ ತೊಂದರೆಯಾಗುವುದಿಲ್ಲ, ದುಡ್ಡು ಬರುತ್ತದೆ, ಕೆಲಸ ಮಾಡಿಕೊಳ್ಳಿ.

ಶ್ರೀ ಹೆಚ್.ಪಿ.ಬಾಲಕೃಷ್ಣ :– ರವಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೊಳೆನರಸೀಪುರ ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಹೇಳಿದರು.

ಶ್ರೀ ಸಿ.ಟಿ.ರವಿ :– ಲಾಭವಾಗುತ್ತದೆ ಎಂದರೆ ಅದು ಅತ್ಯಂತ ಹಿಂದುಳಿದುದು ಎಂದು ಮಾಡಿಸಿಬಿಡುತ್ತೀರಿ ಎಂದು ನಾನು ಹೇಳಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ :–ನೀವು Annexure-II ಎಂದು ಮಾಡಿಕೊಂಡು ನಮಗೆ ಬರಬೇಕಾದ ದುಡ್ಡನ್ನೇ cut ಮಾಡಿ ನಿಮಗೆ ಬೇಕಾದ ಕಡೆಗೆ ಹಂಚಿಕೊಂಡಿರಿ. ಇದು ಯಾವ ಧರ್ಮ?

ಶ್ರೀ ಬಾಲಚಂದ್ರ ಜಾರಕಿಹೊಳಿ :– ಅದನ್ನು ಸರಿಪಡಿಸಿಕೊಳ್ಳುತ್ತೇವೆ. ಮುಂದೆ ಸಾಕಷ್ಟು ದುಡ್ಡು ಎಲ್ಲ ಕಡೆಗೂ ಬರುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ :–ಸರಿಪಡಿಸುವುದು ನಿಮ್ಮ ಕೈಯಲ್ಲಿದೆಯೇ ಎಂದು ನೋಡಿ. ಅದು ನಿಮ್ಮ ಕೈಯಲ್ಲಿ ಇಲ್ಲ. ನಿಮ್ಮ ಕೈಯಲ್ಲಿ ಇದ್ದಿದ್ದರೆ ಹೋದ ಬಾರಿಯೆಲ್ಲ ಹೀಗೆ ಆಗುತ್ತಿರಲಿಲ್ಲ. ದಯವಿಟ್ಟು ನೋಡಿ. ಈ ರೀತಿ ಅನ್ಯಾಯ ಮಾಡಬೇಡಿ. ಕಾನೂನಿನದು, ಯಾರಾದರೂ ಕೋರ್ಟಿಗೆ ಹೋದರೆ ಕಷ್ಟವಾಗುತ್ತದೆ.

ಶ್ರೀ ಎ.ಮಂಜು :– ಟೌನ್ ಪಂಚಾಯಿತಿಯಲ್ಲಿ ಹಾಸನ ಜಿಲ್ಲೆ ಕಾಣುತ್ತದೆಯೇ? ಹಾಸನ ಜಿಲ್ಲೆ ಕೂಡ ಕರ್ನಾಟಕ ರಾಜ್ಯದಲ್ಲಿದೆ ಎನ್ನುವುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ತಾಲ್ಲೂಕಿಗೆ ಎರಡು ತರಹದ ಮೋಸವಾಗಿದೆ. ರೇವಣ್ಣನವರಕಡೆಯಿಂದಲೂ ಮೋಸ, ಇವರ ಕಡೆಯಿಂದಲೂ

ಮೋಸವಾಗುತ್ತಿದೆ. ಅವರು ಇದ್ದಾಗ ಅವರು ಅಭಿವೃದ್ಧಿ ಮಾಡಿಕೊಂಡರು. ಈಗ ಇವರು ಬಂದಾಗ, ಅಲ್ಲಿ ಅವರಿದ್ದಾರೆ ಎಂದು ಇವರು ಅಭಿವೃದ್ಧಿಯನ್ನೇ ಮಾಡುವುದಕ್ಕೆ ಹೋಗುತ್ತಿಲ್ಲ. ನಮ್ಮ ತಾಲ್ಲೂಕಿಗೆ ಅನ್ಯಾಯವಾಗಿರುವುದರ ಬಗ್ಗೆ ನಾವು ಹೇಳುತ್ತಿದ್ದೇವೆ. ನಮ್ಮ ತಾಲ್ಲೂಕಿಗೆ ಹಣ ಬಿಡುಗಡೆಯಾಗಿಲ್ಲ. ಅಂದರೆ, ಇವರಿಗೆ ಹಾಸನ ಜಿಲ್ಲೆಯ ಬಗ್ಗೆ ಕಾಳಜಿ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮುಂದಿನ ಸಲ ಕೊಡುತ್ತೇನೆ ಎಂದು ಹೇಳಬಾರದು, ಮಂತ್ರಿಗಳು ದಯವಿಟ್ಟು announce ಮಾಡಬೇಕು. ತಾವು ಎಲ್ಲರನ್ನೂ ಸಮಾನತೆಯಿಂದ ನೋಡಿಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ :– ವಿಶೇಷವಾಗಿ ನಮ್ಮ ಊರಿನದ್ದೂ ಸೇರಿಸಿ ಅವರಿಗೆ ಕೊಡಲಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಶಿವಣ್ಣ :– ಅವರು ಮಂತ್ರಿಗಳಾಗಿದ್ದಾಗ ಅಲ್ಲಿಗೆ ಏನೇನು ಬೇಕೋ ಅದೆಲ್ಲವನ್ನೂ ಮಾಡಿಕೊಂಡಿದ್ದಾರೆ. ಈಗ ಅಲ್ಲಿ ಏನೂ ಉಳಿದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ :– ಅದಕ್ಕಾಗಿಯೇ ಈಗ ನಮ್ಮದನ್ನೂ ಸೇರಿಸಿ ಅವರಿಗೆ ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಬಾಲಚಂದ್ರ ಜಾರಕಿಹೊಳಿ :– SFC Special Grant ನಲ್ಲಿ ನಮಗೆ ಕಡಿಮೆ ಬಂತು, ಅವರಿಗೆ ಹೆಚ್ಚು ಬಂತು ಎನ್ನುವ ವ್ಯತ್ಯಾಸ ಬೇಡ ಎಂದು ಹೇಳಿ ಈ ಸಲ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಗರಸಭೆಗೆ 15 ಕೋಟಿ, ಪುರಸಭೆಗೆ 5 ಕೋಟಿ, ಪಟ್ಟಣ ಪಂಚಾಯಿತಿಗಳಿಗೆ 2 ಕೋಟಿ ರೂಪಾಯಿಗಳನ್ನು ಈಗಾಗಲೇ allocation ಮಾಡಿಬಿಟ್ಟಿದ್ದಾರೆ. ನಮ್ಮ ಜಿಲ್ಲೆಗೆ ಬಂದಿಲ್ಲ ಅಥವಾ ಕಡಿಮೆಯಾಯಿತು ಎಂದು ಹೇಳುವುದು ಬೇಡ ಎಂದು ಹೇಳಿ ಸಮಾನವಾಗಿ ಹಂಚಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ಎಲ್ಲರಿಗೂ ದುಡ್ಡು ಬರುತ್ತದೆ. ಯಾರಿಗೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು.

<u>ಶಿರಾನಗರ ಸಭೆಗೆ ಬಿಡುಗಡೆಯಾದ ಅನುದಾನದ ಬಗ್ಗೆ.</u>

(253) ಶ್ರೀ ಜಯಚಂದ್ರ.ಟಿ.ಬಿ (ಶಿರಾ)

ಶ್ರೀ ಬಾಲಚಂದ್ರ ಜಾರಕಿಹೊಳಿ.(ಮಾನ್ಯ ಪೌರಾಡಳಿತ ಸಚಿವರು)

ಅ) ಶಿರಾ ನಗರಸಭೆಗೆ 2004–05 ರಿಂದ 2008–09ರವರೆಗೆ ಯೋಜನೆವಾರು ಬಿಡುಗಡೆಯಾದ ಅನುದಾನವೆಷ್ಟು; ಬಳಕೆಯಾಗಿರುವ ಅನುದಾನವೆಷ್ಟು (ಸಮಗ್ರ ಮಾಹಿತಿಯನ್ನು ನೀಡುವುದು).

ಶಿರಾ ನಗರಸಭೆಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಿದೆ

(1)12ನೇ ಹಣಕಾಸು

(ರೂ.ಲಕ್ಷಗಳಲ್ಲಿ)

ವರ್ಷ	04–05	05–06	06–07	07–08	08–09